ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವನೆ ಅಂಗೀಕಾರ

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರು): ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2004ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ii) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2004, ಪರ್ಯಾಲೋಚನಾ ಪ್ರಸ್ತಾಪ

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಈಗ ಇದರ ಬಗ್ಗೆ ಏನಾದರೂ ಮಾತನಾಡುತ್ತೀರಾ? ಉದ್ದೇಶಗಳು ಏನು ಎನ್ನುವುದನ್ನು ಹೇಳಿ.

ಡಾ: ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಬೆಂಗಳೂರು ವಿಶ್ವವಿದ್ಯಾಲಯ ಈಗಾಗಲೇ ಸುಮಾರು 400 ಕಾಲೇಜುಗಳನ್ನು ಅಫಿಲಿಯೇಟ್ ಮಾಡಿಕೊಂಡಿದೆ. ಆಡಳಿತಾತ್ಮಕ ದೃಷ್ಟಿಯಿಂದ ಇವತ್ತು ನಾಲ್ಕೂವರೆ ಲಕ್ಷ ವಿದ್ಯಾರ್ಥಿಗಳು ಬೇರೆ ಬೇರೆ ಕೋರ್ಸ್‌ನಲ್ಲಿ ಅಲ್ಲಿ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಅದರಲ್ಲಿ ಪರೀಕ್ಷೆ ಮಾಡುವುದಕ್ಕೆ, ಆಡಳಿತವನ್ನು ಮಾಡುವುದಕ್ಕೆ ಆ ಅಫಿಲಿಯೇಟೆಡ್ ಕಾಲೇಜುಗಳಿಗೆಲ್ಲಾ ಮಾಡತಕ್ಕಂಥ ಶೈಕ್ಷಣಿಕವಾದ ವ್ಯವಸ್ಥೆ ಏನಿದೆ ಅದು ಬಹಳ ತೊಂದರೆ ಆಗುತ್ತಿರುವುದರಿಂದ ಆಕಾಡೆಮಿಕ್ ಕೌನ್ಸಿಲ್ ಅನ್ನು ಎಂದರೆ ಬೆಂಗಳೂರು ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಲಿಯನ್ನು ಅವರೇ ಒಂದು ನಿರ್ಧಾರ ಮಾಡಿ ಈಗಾಗಲೇ ಎರಡು ವರ್ಷದ ಹಿಂದೆ ಈ ವಿಶ್ವವಿದ್ಯಾಲಯವನ್ನು ಎರಡು ಮಾಡತಕ್ಕಂಥ ಅವಶ್ಯಕತೆ ಇದೆ ಬಹಳ ತೊಂದರೆ ಇದೆ ಆಡಳಿತ ನಡೆಸುವುದಕ್ಕೆ ಎನ್ನುವ ತೀರ್ಮಾನ ತೆಗೆದುಕೊಂಡು. ಅದಾದಮೇಲೆ ನಾವು ಅದನ್ನು ಪರಿಶೀಲನೆ ಮಾಡಿ ನೋಡಿ, ಹೌದು, ಸೂಕ್ತವಾಗಿದೆ, ಅದನ್ನು ಹತ್ತಿರದಲ್ಲಿ ಇರುವಂತಹ ತುಮಕೂರಿನಲ್ಲಿ ಮಾಡುವುದು ಸೂಕ್ತ ಎಂದು ಹೇಳಿ ಒಂದು ಸಮಿತಿಯನ್ನೂ ಕೂಡ ಮಾಡಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಈ ವಿಶ್ವವಿದ್ಯಾನಿಲಯ ಮಾಡುವುದರಿಂದ ಈ ಬೆಂಗಳೂರು ವಿಶ್ವವಿದ್ಯಾನಿಲಯದ ಹೊರೆಯನ್ನು ತಪ್ಪಿಸುವುದಷ್ಟೇ ಅಲ್ಲ ಹೊಸ ಹೊಸದಾಗಿ ಚಿಂತನೆಗಳನ್ನು ಹಾಗೂ ಹೊಸ ಕೋರ್ಸ್‌ಗಳನ್ನು ಈ ವಿಶ್ವವಿದ್ಯಾಲಯದಲ್ಲಿ ಅಳವಡಿಸುವುದರ ಮೂಲಕ ಈ ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆ ನಡೆಯುತ್ತದೆ, ಅದಕ್ಕೆ ನಾವು ಹೆಚ್ಚು ಪ್ರೋತ್ಸಾಹವನ್ನು ಕೊಡುವಂತಹ ರೀತಿಯಲ್ಲಿ ಆಗುತ್ತದೆ ಎಂದು ಹೇಳಿ ಈ ಮಸೂದೆಯನ್ನು ತಂದಿದ್ದೇವೆ.

ಅಧ್ಯಕ್ಷರು: ಕೋಲಾರ ಜಿಲ್ಲೆಯದು ಯಾವ ಯೂನಿವರ್ಸಿಟಿಗೆ ಹೋಗುತ್ತದೆ?

ಡಾ: ಜಿ. ಪರಮೇಶ್ವರ್: ತುಮಕೂರು ಯೂನಿವರ್ಸಿಟಿಗೆ ಹೋಗುತ್ತದೆ. ಕೋಲಾರ, ಬೆಂಗಳೂರು ರೂರಲ್ ತುಮಕೂರಿಗೆ ಬರುತ್ತದೆ. ಬೆಂಗಳೂರು ರೂರಲ್‌ನಲ್ಲಿ ಕನಕಪುರ ಮತ್ತು ಹೊಸಕೋಟೆ ತಾಲ್ಲೂಕು ಬಹಳ ಹತ್ತಿರದಲ್ಲಿ ಇದೆ ಎಂದು ಸಮಿತಿ ವರದಿಯಲ್ಲಿ ಬಂದಿದೆ, ಅದಕ್ಕೆ ಆ ಎರಡು ತಾಲ್ಲೂಕನ್ನು ಹೊರತುಪಡಿಸಿ ಬೆಂಗಳೂರು ರೂರಲ್ ಅನ್ನು ಸೇರಿಸಿಕೊಂಡಿದ್ದೇವೆ.

†ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಇದೇನು ಕಾಕತಾಳೀಯ ನ್ಯಾಯವೋ ಗೊತ್ತಿಲ್ಲ. ಡಾ: ಜಿ. ಪರಮೇಶ್ವರ್ ಉನ್ನತ ಶಿಕ್ಷಣ ಸಚಿವರು, ಹಾಗೂ ಅವರು ತುಮಕೂರು ಉಸ್ತುವಾರಿ ಸಚಿವರು. ಯೂನಿವರ್ಸಿಟಿ ಬೈಫರ್‌ಕೇಟ್ ಆದಮೇಲೆ ಹೊಸ ಯೂನಿವರ್ಸಿಟಿ ತುಮಕೂರಿನಲ್ಲಿ ಆಗುತ್ತಿದೆ. ಅಕಸ್ಮಾತ್ ಮುನಿಯಪ್ಪನವರು ಹೈಯರ್ ಎಜುಕೇಷನ್ ಮಿನಿಸ್ಟರ್ ಆಗಿದ್ದರೆ ಆಗ ಯೂನಿವರ್ಸಿಟಿ ಕೋಲಾರದಲ್ಲಿ ಆಗುತ್ತಿತ್ತಾ? ನನಗೆ ಗೊತ್ತಿಲ್ಲ ಅದು. ಏಕೆಂದರೆ ಕೋಲಾರ ಹಾಗೂ ತುಮಕೂರು ಸೇರಿಕೊಂಡು ತಾವು ಮಾಡುತ್ತಿದ್ದೀರಿ. ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ ಕೋಲಾರ ಕೂಡ ಬಹಳ ಹಿಂದುಳಿದ ಜಿಲ್ಲೆ. ಅಲ್ಲಿ ಮಾಡಬಹುದಾಗಿತ್ತು. ನಾನು ತುಮಕೂರಿನಲ್ಲಿ ಮಾಡಬಾರದೆಂದು ಹೇಳುತ್ತಿಲ್ಲ. ಇದು ಕಾಕತಾಳಿಯ ನ್ಯಾಯ ಎಂದು ಅಷ್ಟೇ ಹೇಳುತ್ತಿದ್ದೇನೆ. ಇದಕ್ಕೆ ತಾವು ಉತ್ತರ ಕೊಡುತ್ತೀರಾ? ನೀವು, ಯೂನಿವರ್ಸಿಟಿ ಅಕಾಡೆಮಿಕ್ ಕೌನ್ಸಿಲ್ ತೀರ್ಮಾನ ಮಾಡಿತು, ನಂತರ ನಾವೂ ಕೂಡ ತುಮಕೂರಿನಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿದೆವು ಎಂದು ಹೇಳಿದಿರಿ. ಹಾಗಾದರೆ ನಾವು ಎಂದರೆ ಯಾರು?

ಡಾ: ಜಿ. ಪರಮೇಶ್ವರ್: ಅದು ಸರ್ಕಾರ, ತಾವು ಹೇಳಿದ ಹಾಗೆ ಇದು ಕಾಕತಾಳಿಯ ನ್ಯಾಯ ಅಷ್ಟೆ. ತುಮಕೂರಿನಲ್ಲಿ ಆಗಬೇಕೆನ್ನುವುದು ನಾನು ತುಮಕೂರಿನಲ್ಲಿ ಉಸ್ತುವಾರಿ ಸಚಿವನಾಗಿದ್ದೇನೆ ಎನ್ನುವ ಕಾರಣವಾಗಿರುವುದು ಅಲ್ಲ. ತುಮಕೂರಿನಲ್ಲಿ ಈಗಾಗಲೇ ತಮಗೆ ತಿಳಿದಿರುವ ಹಾಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಒಳ್ಳೆಳ್ಳೆಯ ಸಂಸ್ಥೆಗಳು ಇವೆ. ಸಿದ್ದಗಂಗಾ ಕ್ಷೇತ್ರದ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ರಾಷ್ಟ್ರದಲ್ಲಿ ಪ್ರಬುದ್ಧಮಾನಕ್ಕೆ ಬಂದಿರುವಂತಹ ಸಂಸ್ಥೆಗಳು ಇವೆ. ಹೆಚ್‌ಎಂಎಸ್ ಸಂಸ್ಥೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಸಲಹೆ, ಮಾನ್ಯ ಮಂತ್ರಿಗಳಿಗೆ, ಈ ಘನ ಸರ್ಕಾರಕ್ಕೆ ಏನೆಂದರೆ, ಬೀದರ್‌ನಲ್ಲಿ ಒಂದು ವಿಶ್ವವಿದ್ಯಾನಿಲಯ ಪ್ರಾರಂಭ ಮಾಡಿದ್ದಾರೆ. ಅಲ್ಲಿ 350 ಕೋಟಿ ರೂಪಾಯಿಗಳನ್ನು ಇನ್‌ಫ್ರಾಸ್ಟ್ರಕ್ಚರ್‌ಗೋಸ್ಕರ ಎಂದು ಹೇಳಿ ಸಾಲಕ್ಕೆ ಅರ್ಜಿ ಹಾಕಿದ್ದಾರೆ. ಬಿಜಾಪುರದಲ್ಲಿ ಒಂದು ಮಹಿಳಾ ವಿಶ್ವವಿದ್ಯಾಲಯ ಶುರು ಮಾಡಿದ್ದಾರೆ, ಅದಕ್ಕೆ ಒಂದು ಹೆಸರು ಇಡುತ್ತಾರೆ. ಅದಕ್ಕೆ 350 ಕೋಟಿ ರೂಪಾಯಿ ಇನ್‌ಫ್ರಾಸ್ಟ್ರಕ್ಚರ್‌ಗೋಸ್ಕರ ಹುಡ್ಕೋದಿಂದ ಸಾಲ ಮಾಡಿದ್ದಾರೆ. ತುಮಕೂರಿನಲ್ಲಿ ಒಂದು ಮಾಡುತ್ತಿದ್ದಾರೆ. ಇವರು ಅಧಿಕಾರಕ್ಕೆ ಬಂದರೆ ಅಲ್ಲೊಂದು 350 ಕೋಟಿ ರೂಪಾಯಿ ಸಾಲಕ್ಕೆ ಹುಡ್ಕೋಗೆ ಹಾಕುತ್ತಾರೆ. ನಾನು ಹೇಳುವುದು ಏನೆಂದರೆ 28 ಜಿಲ್ಲೆಗಳು ನಮ್ಮ ಕರ್ನಾಟಕದಲ್ಲಿ ಇದೆ. ಆ 28 ಜಿಲ್ಲೆಗಳಿಗೂ ಸಹ ಒಂದೊಂದು ವಿಶ್ವವಿದ್ಯಾಲಯವನ್ನು ನಿಮ್ಮ ಕಾಲದಲ್ಲೇ ಈ ಸ್ತ್ರೀಶಕ್ತಿಗೆ ಇಂದಿರಾಶಕ್ತಿಯನ್ನು ಮೂರು ವರ್ಷಗಳಲ್ಲಿ ಬರ್ನರ್ ಒಲೆಗಳನ್ನು ಹೂಡುತ್ತೇವೆ ಎಂದು ಹೇಳಿರುವ ಹಾಗೆ

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ವಿಶ್ವವಿದ್ಯಾಲಯವನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಮಾಡುತ್ತೇವೆಂದು ಒಂದು ತಿದ್ದುಪಡಿ ಅದಕ್ಕೆ ತೆಗೆದುಕೊಂಡು ಬಂದರೆ ಬಹಳ ಚೆನ್ನಾಗಿ ಇರುತ್ತದೆ. ಅದಕ್ಕೆ ಸಾರಾಸಗಟಾಗಿ ಒಪ್ಪಿಗೆಯನ್ನು ಕೊಡಬಹುದು ಎಂಬುದು ನನ್ನ ಒಂದು ಸಲಹೆ ಸ್ವಾಮಿ.

ಡಾ: ಜಿ. ಪರಮೇಶ್ವರ್: ಬೇರೆ ಯಾರಾದರೂ ಈ ಮಾತನ್ನು ಹೇಳಿದ್ದರೆ ನಾನು ಯೋಚನೆ ಮಾಡುತ್ತಿದ್ದೆ. ಆದರೆ ಸಿಂಧ್ಯ ಅವರೇ ಹೇಳುತ್ತಾರೆಂದರೆ ಆಶ್ಚರ್ಯವಾಗುತ್ತದೆ. ಏಕೆಂದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆಯನ್ನು ತರುವುದರ ಮೂಲಕ ಕರ್ನಾಟಕ ರಾಜ್ಯದಲ್ಲಿ ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿಯನ್ನು ತರುವುದರ ಮೂಲಕ ಹ್ಯೂಮನ್ ರಿಸೋರ್ಸಸ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಎಷ್ಟು ನಮಗೆ ಅವಕಾಶ ಸಿಕ್ಕಿತು, ಅಲ್ಲಿ ಬಂದಂತಹ ಪದವೀಧರರು ಇಡೀ ವಿಶ್ವದಲ್ಲೇ ಕರ್ನಾಟಕಕ್ಕೆ ಹಾಗೂ ರಾಷ್ಟ್ರಕ್ಕೆ ಇನ್‌ಫರೆಮೇಷನ್ ಟೆಕ್ನಾಲಾಜಿಯಲ್ಲಿ ಹೆಸರನ್ನು ತಂದರು, ಮತ್ತೆ ಫಿಜಿಕ್ಸ್, ಕೆಮಿಸ್ಟ್ರಿ ಹಾಗೂ ಮ್ಯಾಥಮೆಟಿಕ್ಸ್ ಇರಬಹುದು ಪ್ರಪಂಚದ ಅನೇಕ ವಿಶ್ವವಿದ್ಯಾಲಯದಲ್ಲಿ ತಾವು ಹೋಗಿ ನೋಡಿದರೆ ಪ್ರೊಫೆಸರ್ಸ್, 'ಹೆಡ್ ಆಫ್ ದಿ ಡಿವಿಜನ್'ಗೆ ನಮ್ಮ ಕರ್ನಾಟಕದವರು ಇದ್ದಾರೆ. ತಮಗೆ ಆಶ್ಚರ್ಯವಾಗಹುದು. ಇವತ್ತು ಲೂಸಿಯಾನ ಯೂನಿವರ್ಸಿಟಿ ಯುನೈಟೆಡ್ ಸ್ಟೇಟ್‌ನಲ್ಲಿ ನಾಸಾದಿಂದ ಮೂನ್ ಮೇಲೆ ಏನು ಲ್ಯಾಂಡ್ ಆಯಿತಲ್ಲಾ ಅದಕ್ಕೆ ಸಾಫ್ಟ್‌ವೇರ್ ಡೆವಲಪ್ ಮಾಡಿದವರು ನಮ್ಮ ಬೆಂಗಳೂರಿನವರಾದ ಸೀತಾರಾಮ ಅಯ್ಯಂಗಾರ್ ಎಂದು. He is the Head of Division of Computer Science in Lusiana State University. ಇಂತಹ ಪ್ರತಿಷ್ಠಿತ ವ್ಯಕ್ತಿಗಳೆಲ್ಲಾ ಪ್ರಪಂಚದಾದ್ಯಂತ ಇದ್ದಾರೆ. ನಮ್ಮ ಅಸೆಟ್ ಯಾವುದೆಂದರೆ ಹ್ಯೂಮನ್ ರಿಸೋರ್ಸ್. ಇವತ್ತು ಇಡೀ ಪ್ರಪಂಚ ಭಾರತದ ಕಡೆ ನೋಡುತ್ತಿರುವುದು ಏಕೆ ಎಂದರೆ They have a well qualified efficient human resource. ಇದನ್ನು ನಾವು ಮಾಡಬೇಕೆಂದರೆ, ಮಾನ್ಯ ಸಿಂಧ್ಯರವರಿಗೆ ಈ ಮಾಹಿತಿ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನೂರು ಪರ್ಸೆಂಟ್ ಪ್ರೈಮರಿ ಸ್ಕೂಲುಗಳಲ್ಲಿ ನಮ್ಮ ವಿದ್ಯಾರ್ಥಿಗಳು ಅಡ್ಮಿಷನ್ ಆದರೆ, ಅವರು ವಿಶ್ವವಿದ್ಯಾಲಯಕ್ಕೆ ಬರಬೇಕಾದರೆ ಆರು ಪರ್ಸೆಂಟ್ ಮಾತ್ರ ಬರುತ್ತಾರೆ. It is only six percent entering the protals of the Universities in India today. ನಾವು ಇನ್ನು ಎಷ್ಟು ಮಾಡಿದರೂ ಕೂಡ ಸಾಲದು. ಆ ಕಾರಣಕ್ಕೆ ಏನೋ ಒಂದು ವಿಶ್ವವಿದ್ಯಾಲಯ ತುಮಕೂರಿನಲ್ಲಿ ಮಾಡಬೇಕು ಒಂದು ಕೋಲಾರದಲ್ಲಿ ಮಾಡಬೇಕು. ನಾಳೆ ತಾವು ಅಧಿಕಾರಕ್ಕೆ ಬಂದರೆ ಬಹುಶಃ ಕನಕಪುರದಲ್ಲಿ ಒಂದು ಸೆಂಟರ್ ಆಫ್ ಎಕ್ಸಲೆನ್ಸ್ ಒಂದು ವಿಶ್ವವಿದ್ಯಾಲಯವನ್ನು ಮಾಡಬಹುದು. ಇದು ಏಕೆ ಆಗುತ್ತದೆ ಎಂದರೆ ನಿಜವಾದ ಕಾಳಜಿ ಏನೆಂದರೆ ಈ ವಿಶ್ವವಿದ್ಯಾಲಯದಲ್ಲಿ ಮಾಡುವುದರ ಮೂಲಕ ಎರಡು ರೀತಿಯಲ್ಲಿ ಅನುಕೂಲವಾಗುತ್ತದೆ. ಒಂದು ಯಾರಿಗೆ ಶಿಕ್ಷಣ ಬಹಳ ದೂರ ಉಳಿಯುತ್ತದೆ, ಯಾರಿಗೆ ಯೂನಿವರ್ಸಿಟಿ ಎಜುಕೇಷನ್ ಹತ್ತಿರದಲ್ಲಿ ಸಿಗುತ್ತಿರಲಿಲ್ಲ, ಗ್ರಾಮೀಣ ಪ್ರದೇಶದಲ್ಲಿ ಇರುವಂತಹ ವಿದ್ಯಾರ್ಥಿಗಳಿಗೆ ಬೆಂಗಳೂರಿನಲ್ಲಿ ಬರಬೇಕೆಂದರೆ ಬಹಳ ಕಷ್ಟ, ಅಂತಹವರಿಗೆ ಅನುಕೂಲವಾಗುತ್ತೆ. ತಮಗೆ ಗೊತ್ತಿದ್ದ ಹಾಗೆ ತಮ್ಮ ಕಾಲದಲ್ಲಿ ಕೋಲಾರದಿಂದ ಬೆಂಗಳೂರಿಗೆ ಬರಬೇಕು ಎಂದರೆ ಕಷ್ಟ ಇತ್ತು, ಇಂತಹ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ಇವತ್ತು ಅವರ ಮನೆ ಬಾಗಿಲಿಗೆ ನಾವು ಶಿಕ್ಷಣವನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ಒಂದು ಕಡೆ ಓಪನ್ ಯೂನಿವರ್ಸಿಟಿ ಮಾಡುವುದರ ಮೂಲಕ we are taking the higher education to

the door steps of the people. ಹೈಯರ್ ಎಜುಕೇಶನ್ ಅನ್ನು ಅವರ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ. ಬಡ ಜನರು ಯಾರು ಇದ್ದರು, ಹರಿಜನ ಗಿರಿಜನ ಯಾರಿದ್ದರು, ದಲಿತರು ಯಾರಿದ್ದರು, ಅವರಿಗೆ ಪದವಿ ಶಿಕ್ಷಣವನ್ನು ಕೊಡಬೇಕಾದರೆ ತಮಗೆ ಆಶ್ಚರ್ಯವಾಗಬಹುದು. ಇವತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 800 ಪಿ.ಹೆಚ್.ಡಿ.ಗಳು ರಿಜಿಸ್ಟರ್ ಆಗಿವೆ. ಕಳೆದ ಕಾನ್ವೊಕೇಷನ್‌ನಲ್ಲಿ 150 ಗೋಲ್ಡ್ ಮೆಡಲ್‌ಗಳನ್ನು ತೆಗೆದುಕೊಂಡರು. ಅದಕ್ಕೆ ನಾವು ಸಂತೋಷವನ್ನು ಪಡಬೇಕು, ಅವರಿಗೆ ಅವಕಾಶವನ್ನು ಕೊಡುವಂಥಾದ್ದನ್ನು ನಾವು ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದೇವೆ, ಆದುದರಿಂದ ಮಾನ್ಯ ಅಧ್ಯಕ್ಷರೆ, ಇದನ್ನು ಅಂಗೀಕರಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಈಗ ಬೆಂಗಳೂರು ಕೋಲಾರಕ್ಕೆ ಎಷ್ಟು ದೂರವಿದೆ, ತುಮಕೂರಿಗೆ ಏಕೆ ವಿಶ್ವವಿದ್ಯಾಲಯವನ್ನು ಮಾಡಬೇಕಾಗಿತ್ತು? ಮತ್ತು ಮೈಸೂರು ಯೂನಿವರ್ಸಿಟಿ, ಗುಲ್ಬರ್ಗಾ ಯೂನಿವರ್ಸಿಟಿ, ಈ ಯೂನಿವರ್ಸಿಟಿಗಳಲ್ಲಿ ಎಷ್ಟು ಲಕ್ಷ ಜನ ವಿದ್ಯಾರ್ಥಿಗಳು ಇದ್ದಾರೆ? Why this bifurcation? ಈಗ ಹೊಸಕೋಟೆ ಮತ್ತು ಕನಕಪುರ ಮಾತ್ರ ಬೆಂಗಳೂರು ಯೂನಿವರ್ಸಿಟಿಗೆ, Why should they go to Tumkur for the graduation and all that? ನಾನು ಹೇಳುವುದೆಂದರೆ affiliated Kolar is nearest to the Bangalore city and Chintamani. ಇವೆಲ್ಲಾ ಇರುವಾಗ What about Devanahalli? See, why bifurcation of this University? ನೀವು ತುಮಕೂರಿನಲ್ಲಿ ಮಾಡವ ಬದಲು What is the strength now? How many laksh? ಎಷ್ಟು ಜನ ಲಕ್ಷಾಂತರ ಸ್ಟೂಡೆಂಟ್ಸ್ ಇದ್ದಾರೆ, ಗುಲ್ಬಾರ್ಗದಲ್ಲಿ ಎಷ್ಟು ಜನ ಇದ್ದಾರೆ, ದಯವಿಟ್ಟು ಅದು ಒಂದು ಸ್ಟ್ಯಾಟಿಸ್ಟಿಕ್ಸ್ ಅನ್ನು ಕೊಡಿ, ಬೆಂಗಳೂರು ಯೂನಿವರ್ಸಿಟಿಯಲ್ಲಿ ನಾಲ್ಕು ಲಕ್ಷ ಜನ ವಿದ್ಯಾರ್ಥಿಗಳು ಇದ್ದಾರೆ, ಅದಕ್ಕೆ ತುಮಕೂರಿನಲ್ಲಿ ಒಂದು ಮಾಡಬೇಕೆಂದು ತಾವು ಹೇಳುತ್ತಿದ್ದೀರಿ. ನೀವು ಡಿಸ್ಟ್ರಿಕ್ಟ್ ಮಿನಿಸ್ಟರ್ ಆಗಿದ್ದೀರಿ, ಅದಕ್ಕೆ ಮಾಡುತ್ತಿದ್ದಿರೆಂದು ಅಲ್ಲ. ನೀವು ತುಮಕೂರಿನಲ್ಲಿ ಮಾಡಬೇಕೆಂದರೆ, ಕೋಲಾರದಿಂದ ತುಮಕೂರಿಗೆ ಹೋಗಬೇಕು. Bangalore is nearer, Why you should have this discrimination? ಇದು ಏತಕ್ಕೆ? ತುಮಕೂರಿನಲ್ಲಿ ಯೂನಿವರ್ಸಿಟಿ ಮಾಡುವಂಥಾದ್ದು ಬೇಕಾಗಿಲ್ಲ, ನೀವು ಮಾಡಲೇಬೇಕೆಂದು ಕಾಯಿದೆಯನ್ನು ತಂದಿದ್ದೀರಿ, ಅದನ್ನು ಮಾಡುವಾಗ ದಯವಿಟ್ಟು nearest places must be included in Bangalore University not in Tumkur University. ಆದುದರಿಂದ ಇದನ್ನು ಅಮೆಂಡ್ ಮಾಡಿ, ಈಗ ನಾನು ಎರಡು ಸ್ಥಳಗಳನ್ನು ಹೇಳಿದ್ದೇನೆ. ಅದು ಹೊಸಕೋಟೆ ಮತ್ತು ಕನಕಪುರ, ಮತ್ತೆ ಕೋಲಾರ Why should go to Tumkur? ದಯವಿಟ್ಟು ಇದನ್ನು ಬೈಫರ್‌ಕೇಶನ್ ಮಾಡಿ. ದೇವನಹಳ್ಳಿ ತುಮಕೂರಿಗೆ ಹತ್ತಿರ ಇದೆಯೋ, ಬೆಂಗಳೂರಿಗೆ ಹತ್ತಿರ ಇದೆಯೋ, ಹೊಸಕೋಟೆಯೂ, ದೇವನಹಳ್ಳಿ ಇದು ಎರಡು ಒಂದೇ, ಅಲ್ಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಆಗುತ್ತಿದೆ, ಆದುದರಿಂದ ನೀವು ತುಮಕೂರಿನಲ್ಲಿ ಯೂನಿವರ್ಸಿಟಿ ಮಾಡುವಂಥಾದ್ದು, ಮತ್ತು ಮೈಸೂರು ಯೂನಿವರ್ಸಿಟಿಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಇದ್ದಾರೆ, ಅದರ ಇನ್‌ಫರ್‌ಮೇಷನ್ ಅನ್ನು ಕೊಡಿ. How many lakhs of students were studying in Mysore University.?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ರಾಜಕೀಯವಾಗಿ ನಾವು ಮಂತ್ರಿಯಾಗಿರುವಾಗ, ಯೂನಿವರ್ಸಿಟಿ ಆಯಿತು, ಎಂದು ಹೇಳಿಕೊಳ್ಳುವ ಉದ್ದೇಶದಿಂದಲೇ, ಇದನ್ನು ಮಾಡುತ್ತಿದ್ದಾರೆಂಬ ಬಗ್ಗೆ ನಮಗೆಲ್ಲಾ ಸ್ಪಷ್ಟವಾಗಿ ತಿಳಿದಿದೆ. ಇದರಲ್ಲಿ ಏನೂ ಮುಚ್ಚುಮರೆ ಇಲ್ಲ, ಈ ವಿಚಾರ ನಮಗೂ ಗೊತ್ತಿದೆ, ಅವರಿಗೂ ಗೊತ್ತಿದೆ, ಈಗ ನೀನು ಕೇಳುವಂಥಾದ್ದು ಏನೆಂದರೆ ಗುಲ್ಬರ್ಗಾ ಯೂನಿವರ್ಸಿಟಿ, ಗುಲ್ಬರ್ಗಾ ಎಲ್ಲಿದೆ, ಬಳ್ಳಾರಿ ಎಲ್ಲಿದೆ? ಇಲ್ಲಿ ಉತ್ತರ ಕರ್ನಾಟಕಕ್ಕೆ ಮಲತಾಯಿ ಧೋರಣೆಯಾಗುತ್ತಿದೆ, ನೀವು ನಿರ್ಲಕ್ಷ್ಯ ಮಾಡುತ್ತಿದ್ದೀರೆಂಬುದಕ್ಕೆ, ಈ ರೀತಿಯ ಸರ್ಕಾರಗಳೇ, ಕಾರಣವಾಗಿದೆ.

ಡಾ: ಜಿ. ಪರಮೇಶ್ವರ್: ನಾವು ಬೀದರ್ ಜಿಲ್ಲೆಗೂ ಕೊಟ್ಟಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನೀವು ಬೀದರ್ ಜಿಲ್ಲೆಗೆ ಪಶು ಸಂಗೋಪನೆಯನ್ನು ಏನು ಕೊಟ್ಟಿರುವಂಥಾದ್ದು, ಇಲ್ಲಿ ರೆಗ್ಯುಲರ್ ಯೂನಿವರ್ಸಿಟಿ, ಬೀದರ್ ಎಲ್ಲಿದೆ, ಗುಲ್ಬರ್ಗಾ ಎಲ್ಲಿದೆ, ರಾಯಚೂರು, ಕೊಪ್ಪಳ, ಬಳ್ಳಾರಿ, ಈ ಜಿಲ್ಲೆಗಳು ಎಲ್ಲಿವೆ? ಈ ರಾಜ್ಯದಲ್ಲಿ ಅಸಮತೋಲವನ್ನು ಸರ್ಕಾರ ಹೇಗೆ ಮಾಡುತ್ತಿದೆ, ಎಂಬುದಕ್ಕೆ ಇದು ಒಂದು ತಾಜಾ ಉದಾಹರಣೆಯಾಗಿದೆ. ಉತ್ತರ ಕನ್ನಡ ಜಿಲ್ಲೆ, ಧಾರವಾಡ ಎಲ್ಲಿದೆ, ಬೆಳಗಾಂ, ನಮ್ಮ ವಿಜಾಪುರ, ಬಾಗಲಕೋಟೆ ಎಲ್ಲಿದೆ? ಉತ್ತರ ಕನ್ನಡ, ಎಲ್ಲಿದೆ, ನಾವು ಈಗ ಪ್ರತ್ಯೇಕ ಯೂನಿವರ್ಸಿಟಿಯನ್ನು ಬೇಕೆಂದು ಏಕೆ ಕೇಳಬಾರದು? ಇಲ್ಲಿ ಇವರು ಮಂತ್ರಿಗಳು ಎಲ್ಲೆಲ್ಲಿ ಆಗುತ್ತಾರೋ, ಅಲ್ಲಿ ಒಂದೊಂದು ಯೂನಿವರ್ಸಿಟಿಯನ್ನು ಮಾಡುವಂಥಾದ್ದು, ಇದೊಂದು ಹವ್ಯಾಸ ಆಗುವುದಾದರೆ, ಯಾವುದೇ ಶಿಕ್ಷಣ ಕ್ಷೇತ್ರ ಬೆಳೆಯಲು ಸಾಧ್ಯವಿಲ್ಲ, ಇನ್ನು ಕೊನೆಯದಾಗಿ ನಾನು ಒಂದು ಮಾತನ್ನು ಕೇಳುವುದೇನೆಂದರೆ ಇವರಲ್ಲಿ ಆಡಳಿತಾತ್ಮಕ ಸುಧಾರಣೆ ತರುವುದರಿಂದಾಗಿ, ಅಲ್ಲಿ ಕಾರ್ಯ ಒತ್ತಡವನ್ನು ಕಡಿಮೆ ಮಾಡಬಹುದಿತ್ತಲ್ಲಾ, ನೀವು ಆಡಳಿತಾತ್ಮಕ ಸುಧಾರಣೆಯನ್ನು ತೆಗೆದುಕೊಂಡು ಬನ್ನಿ, ನೀವು ಯೂನಿವರ್ಸಿಟಿಗಳಲ್ಲಿ ಆಡಳಿತಾತ್ಮಕ ಸುಧಾರಣೆಯನ್ನು ತಂದರೆ, ತುಮಕೂರಿನ ಜಿಲ್ಲೆ, ಕೋಲಾರ ಜಿಲ್ಲೆಯ ವಿದ್ಯಾರ್ಥಿಗಳಿಗೆ, ಅನುಕೂಲ ಕಲ್ಪಿಸುವ ಬಗ್ಗೆ ಯೋಚನೆ ಮಾಡಿ, ಪಿ.ಜಿ. ಸೆಂಟರ್ ಎಲ್ಲಾ ಕಾಲೇಜುಗಳಿಗೂ ಕೊಡುತ್ತಿಲ್ಲವೇ? ಇದು ಶಿಕ್ಷಣಕ್ಕೆ ಅನುಕೂಲವಾಗುತ್ತಿಲ್ಲವೇ? ಅಧ್ಯಯನ ಕೇಂದ್ರಗಳನ್ನು ಕೊಡುತ್ತಿಲ್ಲವೇ? ಎಲ್ಲಾ ಕಾಲೇಜುಗಳಿಗೂ ಕೊಡುತ್ತಿದೆ, ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತಿದೆ. ನೀವು ಆಡಳಿತಾತ್ಮಕವಾದಂತಹ ತೊಂದರೆಗಳನ್ನು ತಪ್ಪಿಸದೇ ಹೋದರೆ, ಈ ಆಡಳಿತಾತ್ಮಕ ಖರ್ಚಿನಿಂದಾಗಿ ಇವತ್ತು ರಾಜ್ಯದಲ್ಲಿ ಸಾಲದ ಹೊರೆಯು ಜಾಸ್ತಿಯಾಗುತ್ತಿದೆ, ಬಡವಾಗುತ್ತಿದೆ, ಮತ್ತೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವಂಥಾದ್ದು, ಅಲ್ಲಿಂದ ಉದ್ಯೋಗ, ನೌಕರಿ ಎಂದು ಒಂದಷ್ಟು ಜನರನ್ನು ನೇಮಿಸಿಕೊಳ್ಳುವಂಥಾದ್ದು, ಮತ್ತೆ ಅವರಿಗೆ ಪಗಾರವನ್ನು ಕೊಡುವಂಥಾದ್ದು, ಈ ರೀತಿಯಾಗಿ ಬರುವಂತಹ ಆದಾಯವೆಲ್ಲಾ, ಈ ರೀತಿಯಾಗಿ ಡೆಡ್ ಇನ್‌ವೆಸ್ಟ್‌ಮೆಂಟ್ ಆಗುವಂಥಾದ್ದು, ಈ ಸ್ಥಿತಿ ಬರುತ್ತದೆ, ಮತ್ತೆ ಇನ್ನಾರೊ ನೌಕರರಿಗೆ ಸಂಬಳ ಕೊಡುವಂತಹ ಪರಿಸ್ಥಿತಿ ಬರುತ್ತದೆ, ನೀವು ಆಡಳಿತಾತ್ಮಕವಾದಂತಹ ಸುಧಾರಣೆಯನ್ನು ತಂದಿದ್ದರೆ, ಹೇಳಿ. ನಾವು ಇದನ್ನು ಸುಧಾರಣೆ ತರುವಂಥಾದ್ದಕ್ಕೆ ಇಂತಹ ವರದಿಯನ್ನು ತೆಗೆದುಕೊಂಡಿದ್ದೇವೆ, ನಾವು ಇಂತಹ ವರದಿಯನ್ನು ತೆಗೆದುಕೊಂಡಿದ್ದೇವೆ, ತಜ್ಞರ ವರದಿಯ ಆಧಾರದ ಮೇಲೆ ಮಾಡುತ್ತಿದ್ದೇವೆಂದು ಹೇಳಲಿ, ಅಕಾಡೆಮಿಕ್ ಕೌನ್ಸಿಲ್, ಸಿಂಡಿಕೇಟ್ ಅಲ್ಲಿ ಯಾವ ರೀತಿಯ ನಿರ್ಣಯಗಳು ಆಗುತ್ತವೆ, ಎಂಬುದು ತಮಗೆಲ್ಲಾ

ಗೊತ್ತಿದೆ, ಇಲ್ಲಿ ಅದಲ್ಲ, ಈಗ ಆಡಳಿತ ಸುಧಾರಣೆ ಮಾಡದಿದ್ದರೆ ಈ ತೊಂದರೆಯನ್ನು ತಪ್ಪಿಸಬಹುದಿತ್ತು, ಅದರ ಬಗ್ಗೆ ಸರ್ಕಾರ ಏಕೆ ಮುಂದಾಗಲಿಲ್ಲ? ಹಾಗಾಗಿ ಈ ರೀತಿ ಮಾಡುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಪಾವಿತ್ರತೆಯನ್ನು ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಪರಿವರ್ತನೆಯನ್ನು ತರುತ್ತೇವೆಂದರೆ ಯೂನಿವರ್ಸಿಟಿಯನ್ನು ತರುವುದರಿಂದ ಪರಿವರ್ತನೆ ಮಾಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ, ಮೂಲಭೂತವಾಗಿ, ಶಿಕ್ಷಣ ಕ್ಷೇತ್ರದಲ್ಲಿ ಪರಿವರ್ತನೆಯನ್ನು ತರುವುದಕ್ಕೆ, ಬೇರೆ ಅನೇಕ ವಿಭಾಗಗಳು ಇವೆ, ಅದರ ಬಗ್ಗೆ ವಿಶೇಷವಾದಂತಹ ಚಿಂತನೆಯಾಗಬೇಕು. ಹಾಗಾಗಿ ಈಗ ನನ್ನದು ಈಗ ವಿನಂತಿ ಏನೆಂದರೆ ನಮಗೂ ಒಂದು ಯೂನಿವರ್ಸಿಟಿಯನ್ನು ಡಾ: ಜಿ. ಪರಮೇಶ್ವರ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾವೂ ಸಹ ಧಾರವಾಡ ಜಿಲ್ಲೆಯಿಂದ ಬಹಳ ದೂರವಿದ್ದೇವೆ, ಮಲೆನಾಡು ಜಿಲ್ಲೆ, ನಮ್ಮದು 11 ತಾಲ್ಲೂಕುಗಳು ಇವೆ, ಜನಸಂಖ್ಯೆ ಬಹಳ ವಿರಳವಾಗಿ, ನಮಗೆಲ್ಲಾ ಕಷ್ಟ, ಹಾಗಾಗಿ ನಾವು ಒಂದು ಯೂನಿವರ್ಸಟಿಯನ್ನು ಕೇಳುವುದರಲ್ಲಿ ಏನು ತಪ್ಪಿಲ್ಲವೆಂದು ಅನಿಸುತ್ತದೆ.

†**ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)**: ಮಾನ್ಯ ಅಧ್ಯಕ್ಷರೆ, ಹೈಯರ್ ಎಜುಕೇಶನ್‌ನಲ್ಲಿ ಯೂನಿವರ್ಸಿಟಿ ಕಟ್ಟುವುದಕ್ಕೆ ಹಣವಿದೆ ಎಂದು ಆಗಬಾರದು. ಅನೇಕ ವರ್ಷಗಳಿಂದ ರಾಜ್ಯದಲ್ಲಿ ಒಂದು ಬೇಡಿಕೆ ಇದೆ, ನೀವು ವಿಶೇಷವಾಗಿ ಮಹಿಳೆಯರಿಗೆ ಶಿಕ್ಷಣದಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಇದೆ, ಇವತ್ತು ಏನಾಗಿದೆಯೆಂದರೆ ಸರ್ಕಾರಿ ಕಾಲೇಜುಗಳಲ್ಲಿ ಓದುತ್ತಿರುವಂತಹ, ವಿದ್ಯಾರ್ಥಿನಿಯರಿಗೆ ಫೀ ಕನ್‌ಸೆಶನ್ ಇದೆ, ಅವರು ಫೀ ಕಟ್ಟುವ ಹಾಗೆ ಇಲ್ಲ, ಆದರೆ ಅನುದಾನಿತ ಖಾಸಗಿ ಕಾಲೇಜುಗಳಲ್ಲಿ ಓದುತ್ತಿರುವಂತಹ ಹೆಣ್ಣು ಮಕ್ಕಳಿಗೆ ಫೀ ಕನ್‌ಸೆಶನ್ ಇಲ್ಲ, ಅದನ್ನು ಸರ್ಕಾರದ ಕಡೆಯಿಂದ ತುಂಬಿ ಕೊಡಿ ಎಂದು ಹೇಳಿದರೆ, ಅದನ್ನು ಇವತ್ತಿನವರೆಗೂ ಮಾಡಿಲ್ಲ. ಎಲ್ಲಿ ಸರ್ಕಾರಿ ಕಾಲೇಜುಗಳು ಇಲ್ಲವೋ ಅಲ್ಲಿ ಖಾಸಗಿ ಕಾಲೇಜುಗಳು ಮತ್ತು ಅನುದಾನಿತ ಕಾಲೇಜುಗಳು ಇವೆ, ಈ ಕಾಲೇಜುಗಳಿಗೆ ಹೋಗುವಂತಹ ಹೆಣ್ಣುಮಕ್ಕಳಿಗೆ ಫೀ ಕನ್‌ಸೆಶನ್ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ಹೇಗೆ? ದೊಡ್ಡ ದೊಡ್ಡ ಸಿಟಿಗಳಲ್ಲಿ ಸರ್ಕಾರಿ ಕಾಲೇಜುಗಳು, ಅನುದಾನಿತ ಕಾಲೇಜುಗಳು, ಒಟ್ಟೊಟ್ಟಿಗೆ ಇವೆ, ಅಲ್ಲಿ ಮಕ್ಕಳು ಬರಬೇಕೆಂಬ ದೃಷ್ಟಿಯಿಂದ ಮಾಡುವಂಥಾದ್ದು ಇದು ಸರಿ. ಆದರೆ ನಮ್ಮ ಅನೇಕ ಹಳ್ಳಿಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ, ಅಲ್ಲಿ ಸರ್ಕಾರಿ ಕಾಲೇಜುಗಳು ಇಲ್ಲ, ಬರೀ ಅನುದಾನಿತ ಮತ್ತು ಖಾಸಗಿ ಕಾಲೇಜುಗಳು ಇವೆ. ಅಲ್ಲಿ ಓದುವಂತಹ ಹೆಣ್ಣುಮಕ್ಕಳು ನಿರ್ಭಾಗ್ಯರೇ, ಹೇಳಿ, ಅಲ್ಲಿ ಅವರು ಫೀಸ್ ತುಂಬುವುದಕ್ಕೆ ಆಗದೇ, ಡೊನೇಶನ್ ಕೊಡುವುದಕ್ಕೆ ಆಗದೇ, ಇವತ್ತು ಅವರ ಎಜುಕೇಶನ್ ಮೊಟಕು ಆಗುತ್ತಿದೆ. ಅವರ ಬದುಕು ಹಾಳಾಗುತ್ತಿದೆ, ಪ್ರತಿಭೆಗಳು ಕಮರಿ ಹೋಗುತ್ತಿದೆ, ಇದರ ಬಗ್ಗೆ ನಿಮ್ಮ ಇಲಾಖೆಯವರು ಗಮನಿಸುವುದಿಲ್ಲ, ನೀವು ಹಣವನ್ನು ಇದಕ್ಕೆ ವಿನಿಯೋಗ ಮಾಡುವುದಿಲ್ಲ, ಅಲ್ಲಿ ಖಾಸಗಿ ಕಾಲೇಜುಗಳಲ್ಲಿ ಅನುದಾನಿತ ಕಾಲೇಜುಗಳಲ್ಲಿ ಓದುತ್ತಿರುವಂತಹ ಹೆಣ್ಣುಮಕ್ಕಳಿಗೆ ನೀವು ಫೀ ಕನ್‌ಸೆಶನ್ ಕೊಡುವುದಿಲ್ಲವೆಂದರೆ ಅರ್ಥ ಏನು? ನೀವು ಯೂನಿವರ್ಸಿಟಿಗಳನ್ನು ಮಾಡುವಂಥಾದ್ದು ದೊಡ್ಡದಲ್ಲ, ಈ ಓದುತ್ತಿರುವಂತಹ ಮಕ್ಕಳಿಗೆ, ಓದುವಂಥಾದ್ದಕ್ಕೆ ಏನೆಲ್ಲಾ ಸೌಲಭ್ಯಗಳನ್ನು ಬೇರೆ ಬೇರೆ ಕಾಲೇಜುಗಳಲ್ಲಿ ಕೊಡುತ್ತೀರಿ ಅದನ್ನು ಕೊಡುವಂತಹ ಅವಶ್ಯಕತೆ ಇದೆ ಅದನ್ನು ನೀವು ಗಮನಿಸುತ್ತಿಲ್ಲವೆಂದು ಕಾಣುತ್ತದೆ. ಅದರ ಬಗ್ಗೆಯೂ ನೀವು ಗಮನಿಸಬೇಕು.

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ಡಾ: ಜಿ. ಪರಮೇಶ್ವರ: ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಎನ್. ಸುಬ್ಬಾರೆಡ್ಡಿಯವರು ಬೆಂಗಳೂರಿನಿಂದ ಚುನಾಯಿತರಾಗಿದ್ದಾರೆಂದು ಅಂದುಕೊಂಡಿದ್ದೇವೆ, ಧನ್ಯವಾದಗಳು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಇಲ್ಲಿ ಕೋಲಾರದವರು ತುಮಕೂರಿಗೆ ಹೋಗಬೇಕೆಂದರೆ How far it is? ಬೆಂಗಳೂರು ಹತ್ತಿರವಿದೆ, ಅವರು ಏಕೆ ತುಮಕೂರಿಗೆ ಹೋಗಬೇಕು? ದಯವಿಟ್ಟು ಇದಕ್ಕೆ ನನ್ನ ವಿರೋಧ ಇದೆ.

ಡಾ: ಜಿ. ಪರಮೇಶ್ವರ: ಮಾನ್ಯ ಅಧ್ಯಕ್ಷರೆ, ಮೊನ್ನೆ ತಾನೆ ನಾಲ್ಕು ರಸ್ತೆ ತುಮಕೂರು ಬೆಂಗಳೂರಿಗೆ, ನೆಲಮಂಗಲ-ಬೆಂಗಳೂರಿಗೆ ಆಗಿದೆ. ಮತ್ತೆ ಡಾಬಸ್ ಪೇಟೆಯಿಂದ ಕೋಲಾರಕ್ಕೆ ನ್ಯಾಷನಲ್ ಹೈ-ವೇ, ಡೀವಿಯೇಷನ್ ಆಗುತ್ತಿರುವ ವಿಚಾರವೂ ತಮಗೆ ಗೊತ್ತಿದೆ, ಇದು ಕೇಂದ್ರ ಸರ್ಕಾರದಿಂದ ಆಗುತ್ತಿರುವಂಥಾದ್ದು, ಇದು ಬಹಳ ಸುಲಭವಾಗಿ 40 ನಿಮಿಷಗಳಲ್ಲಿ ಕೋಲಾರದಿಂದ ತುಮಕೂರಿಗೆ, ತುಮಕೂರಿನಿಂದ ಕೋಲಾರಕ್ಕೆ ಬರಬಹುದು, ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆಂದು ಕಾಣುತ್ತದೆ, ಮೊನ್ನೆ ದಿವಸ ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಕೋಲಾರ ಜಿಲ್ಲೆಯ ಲಕ್ಷ್ಮಿ ಎಂಬ ವಿದ್ಯಾರ್ಥಿನಿ ಕೋಲಾರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ 14 ಚಿನ್ನದ ಪದಕಗಳನ್ನು ತೆಗೆದುಕೊಂಡಳು, ಕೋಲಾರದ ಬಗ್ಗೆ ಅಷ್ಟು ಸುಲಭವಾಗಿ ತೆಗೆದುಕೊಳ್ಳಬೇಡಿ, ಅದೂ ಸಹ ಬಹಳ ಪ್ರತಿಷ್ಠಿತವಾಗಿ ಶಿಕ್ಷಣ ಕ್ಷೇತ್ರದಲ್ಲಿ ಬೆಳೆಯುತ್ತಿರುವಂಥದ್ದು ನಮಗೆ ಏನು ಎಂದರೆ, ಅವರು ತುಮಕೂರಿನಲ್ಲಿ ನಮ್ಮ ಜೊತೆಗೆ ಇದ್ದರೆ, ನಾವೂ ಸಹ ಅವರ ಜೊತೆಯಲ್ಲಿ ಬೆಳೆಯುತ್ತೇವೆಂದು ಹೇಳುವಂಥಾದ್ದು, ಇದು ಮುಚ್ಯುಯಲ್, ಇನ್ನು ಎರಡನೆಯದಾಗಿ ಬಳ್ಳಾರಿ ಪಿ.ಜಿ. ಸೆಂಟರ್ ಬಗ್ಗೆ ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಾತನಾಡಿದರು, ಉತ್ತರ ಕರ್ನಾಟಕದ ಬಗ್ಗೆ ಅಸಡ್ಡೆಯನ್ನು ತೋರಿಸುತ್ತಿದ್ದಾರ, ನೆಗ್ಲೆಟ್ ಮಾಡುತ್ತಾರೆಂದು ಹೇಳಿದರು, ನಾವು ಮಹಿಳಾ ವಿಶ್ವವಿದ್ಯಾಲಯವನ್ನು ಬಿಜಾಪುರದಲ್ಲಿ ಮಾಡಿದೆವು.

12.00 ಪಿ.ಎಂ.

ಇಡೀ ರಾಜ್ಯದ ಜುರಿಡಿಕ್ಷನ್ ಅನ್ನು ಕೊಟ್ಟು, ಏಳು ಜಿಲ್ಲೆಯನ್ನು ಅಲ್ಲಿಗೆ ಅಫಿಲಿಯೆಟ್ ಮಾಡಿದ್ದೇವೆ, ತದನಂತರ ಅದು ಒಂದು ಪ್ರಯೋಗದ ರೀತಿಯಲ್ಲಿ, ಮುಂದಿನ ದಿವಸಗಳಲಿ ಅವನ್ನೆಲ್ಲಾ ಸೇರಿಸಿಕೊಳ್ಳಬಹುದು, ಅದೊಂದು ಹೊಸ ಬದಲಾವಣೆ. ಇಡೀ ಮಹಿಳಾ ಬೆಳವಣಿಗೆಯ ಕ್ಷೇತ್ರದಲ್ಲಿ ಮಹಿಳೆಯವರು ಸ್ವಾವಲಂಬಿಗಳಾಗಬೇಕೆಂದು ಬರೀ ಮಾತಿನಲ್ಲಿ ಹೇಳುವುದಲ್ಲ, ಅವರಿಗೆ ಶಿಕ್ಷಣ ಕೊಡುವುದರ ಮೂಲಕ, ಅವರು ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ಅನುಕೂಲವಾಗುತ್ತದೆಂದು ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಲಾಯಿತು. All the specialised courses, we have started there. ವಿಶ್ವೇಶ್ವರಯ್ಯ ಟೆಕ್ನಾಲಾಜಿಕಲ್ ಯುನಿವರ್ಸಿಟಿ ಇಡೀ ರಾಜ್ಯಕ್ಕೆ ಸೇರಿದಂತೆ ಬೆಳಗಾಂನಲ್ಲಿ ಸ್ಥಾಪನೆ ಮಾಡಿದೆವು, ಮೊನ್ನೆ ತಾನೆ ರಾಜ್ಯಪಾಲು, ಮುಖ್ಯಮಂತ್ರಿಗಳು 23 ಕೋಟಿ ರೂಪಾಯಿಗಳ ಕಟ್ಟಡವನ್ನು ಅಲ್ಲಿ ಉದ್ಘಾಟನೆ ಮಾಡಿ ಬಂದರು. ಇವತ್ತು ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸೆಂಟರ್ ಅನ್ನು ಬಳ್ಳಾರಿಯಲ್ಲಿ ಸಂಡೂರಿನಲ್ಲಿ ಮಾಡಿದ್ದೇವೆ. ನಾನು ಮತ್ತು ಮುಖ್ಯಮಂತ್ರಿಗಳು, ಮಾನ್ಯ ಪ್ರಧಾನ ಮಂತ್ರಿಗಳಿಗೆ ಹಾಗೂ ಹೆಚ್‌ಆರ್‌ಡಿ ಮಂತ್ರಿಗಳಿಗೆ ಪತ್ರ ಬರೆದು, ಬಳ್ಳಾರಿ ಜಿಲ್ಲೆಯಲ್ಲಿರುವ ಸಂಡೂರಿಗೆ ಐಐಟಿಯನ್ನು ಮಂಜೂರು ಮಾಡಿಕೊಡಿ ಎಂದು ರಿಕ್ವೆಸ್ಟ್ ಮಾಡಿಕೊಂಡೆವು. ನನ್ನ ಹತ್ತಿರ ಪತ್ರಗಳಿದ್ದಾವೆ ಬೇಕಾದರೆ, ತಾವು ತಮ್ಮ ಶಿಫಾರಸ್ಸನ್ನು ಬಳಸಬಹುದು, ಈಗ ಕೇಂದ್ರದಲ್ಲಿ ಶಿಫಾರಸು ಮಾಡುವುದು ಮುಗಿಯಿತು,

ಮುಂದೆ ನೋಡೋಣ. ಅದೊಂದಾದರು ದಯಮಾಡಿ ಮಾಡಿ, ಏಕೆಂದರೆ ನಮ್ಮ ಸಂಡೂರಿಗೆ ಐಐಟಿ ಆಗಬೇಕು, ಎಲ್ಲಾ ರಾಜ್ಯಗಳಲ್ಲೂ ಐಐಟಿ ಇದೆ ನಮ್ಮ ರಾಜ್ಯದಲಲಿ ಐಐಟಿ ಇನ್ನೂ ಕೂಡ ಆಗಲಿಲ್ಲ; ಕರ್ನಾಟಕ ರಾಜ್ಯ ತಾಂತ್ರಿಕತೆಯಲ್ಲಿ ಇಷ್ಟೊಂದು ಮುಂದುವರೆದ ರಾಜ್ಯವಾಗಿದೆ, ಮೊನ್ನೆ ಬೇರೆ ಇತರೆ ರಾಜ್ಯಗಳಿಗೆ ಐಐಟಿ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯ ಈ ಸರ್ಕಾರ ಯಾವತ್ತೂ ಕೂಡ ನೆಗ್ಲೆಟ್ ಮಾಡಿಲ್ಲ. ಡಾ: ನಂಜುಂಡಪ್ಪನವರ ಸಮಿತಿಯನ್ನು ಮಾಡಿ ವರದಿಯನ್ನು ತರಿಸಿಕೊಂಡಿದ್ದೇವೆ, ಆ ಒಂದು ಹಿನ್ನೆಲೆಯಲ್ಲಿ ಈ ಎಲ್ಲಾ ಬೆಳವಣಿಗೆಯಾಗುತ್ತಿರುವುದು. ನಾವು ಪ್ರೈಮರಿ ಎಜ್ಯುಕೇಷನಲ್ಲಿ ಅಲ್ಲಿ ಕಮಿಷನರೇಟ್ ಮಾಡಿದ್ದೇವೆ, ಅವರ ಶಿಫಾರಸ್ಸಿನ ಮೇಲೆ ಇದನ್ನು ಏಳು ಜಿಲ್ಲೆಗಳು ಒಳಗೊಂಡಂತೆ ಮಾಡಲಾಗಿದೆ. ಬೆಳವಣಿಗೆಯ ದೃಷ್ಟಿಯಿಂದ ಆ ವರದಿಯ ಆಧಾರದ ಮೇಲೆ ಇವತ್ತು ಸರ್ಕಾರ ತಂದಿದೆ. ಹಾಗೆ ತಾವು ಎಲ್ಲವನ್ನು ಸಾರಸಗಟಾಗಿ ಹೇಳುವುದಲ್ಲ. ತಮಗೆ ತಮ್ಮ ಊರಿನಲ್ಲೂ ಒಂದು ಯುನಿವರ್ಸಿಟಿ ಬರಬೇಕೆಂದು ಆಸೆ ಇರಬಹುದು, ತಮ್ಮ ಬೇಡಿಕೆಯನ್ನು ನಂತರ ನೋಡೋಣ, ಆಮೇಲೆ ಬರುತ್ತೇವಲ್ಲಾ; ಆಗ ನಾವು ಪರಿಶೀಲನೆ ಮಾಡೋಣ. ಮಾನ್ಯ ಸದಸ್ಯರಾದ ಅರಗಜ್ಞಾನೇಂದ್ರರವರು ಫೀ ಬಗ್ಗೆ ಕೇಳಿದ್ದಾರೆ, ಈ ಸಂದರ್ಭದಲ್ಲಿ ಅದನ್ನು ಚರ್ಚೆ ಮಾಡುವುದಕ್ಕೆ ಕಷ್ಟವಾಗಬಹುದು. ಮುಂದಿನ ದಿವಸಗಳಲ್ಲಿ ನೋಡೋಣ. ದಯಮಾಡಿ ಇದನ್ನು ಅಂಗೀಕಾರ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2004ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ಪರ್ಯಾಲೋಚಿಸುವುದು:

ಖಂಡ 2 ರಿಂದ 9

ಅಧ್ಯಕ್ಷರು: "ಪ್ರಸ್ತಾವ ಏನೆಂದರೆ "ಖಂಡ 2 ರಿಂದ 9 ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 9 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2004ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

4. ವಿತ್ತೀಯ ಕಾರ್ಯಕಲಾಪಗಳು

ಆಯವ್ಯಯದ ಮೇಲೆ ಮುಂದುವರೆದ ಚರ್ಚೆ

†ಶ್ರೀ ಜೆ.ಎಚ್. ಗೋಪಾಲ ಭಂಡಾರಿ (ಕಾರ್ಕಳ): ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಅನ್ನು ಹೊಸ ಕೊಡುಗೆಯಾಗಿ ಇವತ್ತು ಕರ್ನಾಟಕದ ಸ್ತ್ರೀ ಶಕ್ತಿ ಸಮುದಾಯಕ್ಕೆ ಕೊಟ್ಟಿದ್ದಾರೆ, ನಮ್ಮಲ್ಲಿ ಇದೊಂದು ಅಗತ್ಯವಾದ ಒಂದು ಕಾರ್ಯಕ್ರಮ. ಇದನ್ನು ನಾವೆಲ್ಲರು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇವೆ. ಏಕೆಂದರೆ ಇಲ್ಲಿ ಪ್ರಸ್ತಾಪ ಮಾಡಿದಂತೆ, 15 ಲಕ್ಷ ಕುಟುಂಬಗಳು ಇದರ ವ್ಯಾಪ್ತಿಯಲ್ಲಿ 150 ಕೋಟಿ ರೂಪಾಯಿಗಳ ಉಳಿತಾಯ ಈಗ ಆಗಿದೆ. ಬರಿ ಉಳಿತಾಯ ಮಾತ್ರವಾಗುತ್ತಿಲ್ಲ. ಸ್ವಉದ್ಯೋಗಕ್ಕೆ ಮತ್ತು ಬೇರೆ ಬೇರೆ ರೀತಿಯಲ್ಲಿ ಅಭಿವೃದ್ಧಿಶೀಲರಾಗಬೇಕಾದ ಅನೇಕ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಬ್ಯಾಂಕ್‌ಗಳಿಂದ ಸಾಲದ ಅವಶ್ಯಕತೆಯೂ ಕೂಡ ಇದೆ. ಈಗಾಗಲೇ ನಾವು ನೋಡುತ್ತಿರುವಂತೆ ಸ್ತ್ರೀಶಕ್ತಿ ಗುಂಪುಗಳ ಅವರ ಖಾತೆಗಳನ್ನು ತೆರೆಯುವುದಕ್ಕೆ ಕೆಲವೊಮ್ಮೆ ಹಿಂದೆ ಮುಂದೆ ನೋಡುವಂತಹ ವ್ಯವಸ್ಥೆಯನ್ನು ನಾವು ಇಲ್ಲಿ ಗಮನಿಸಿದ್ದೇವೆ. ಏಕೆಂದರೆ ಬಹಳ ಸಣ್ಣ ಮೊತ್ತದ ಖಾತೆಯಾಗಿದ್ದರಿಂದ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ನಿರ್ವಹಿಸುವುದಕ್ಕೆ ಹೆಚ್ಚು ಕೆಲಸವಾಗುತ್ತದೆ ಎನ್ನುವ ಕಾರಣದಿಂದ ಅದನ್ನು ನಿರಾಕರಣೆ ಮಾಡುವಂತಹ ವ್ಯವಸ್ಥೆಯನ್ನು ಅಲ್ಲಿ ನಾವು ಗಮನಿಸಿದ್ದೇವೆ. ಆದುದರಿಂದ ಇಂತಹ ಸಂದರ್ಭದಲ್ಲಿ ಅವರದೆ ಆದ ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಮಾಡಿ 5000 ರೂಪಾಯಿ ಆ ಒಂದು ಸ್ವಸಹಾಯ ತಂಡಕ್ಕೆ ಹೇರು ಬಂದಮಾಳುಮಾಗಿ ಕೊಡುವಂತಹ ಕಾರ್ಯಕ್ರಮ ಅತ್ಯಂತ ಸ್ವಾಗತಾರ್ಹವಾದ ಕಾರ್ಯಕ್ರಮವೆಂದು ಹೇಳುತ್ತೇನೆ. ಇನ್ನೊಂದು ಮಹಿಳಾ ಸಮುದಾಯಕ್ಕೆ ಇಂದಿರಾ ಜ್ಯೋತಿ ಎನ್ನುವ ಕಾರ್ಯಕ್ರಮ ಕೊಡುಗೆಯಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯವರಿಗೂ ಕೂಡ ಬಹಳ ವ್ಯವಸ್ಥಿತವಾಗಿ ಒಂದು ಸಿಲಿಂಡರ್ ಮತ್ತು ಬರ್ನರ್ ಒಲೆಯನ್ನು ಒದಗಿಸುವ ಕಾರ್ಯಕ್ರಮ ಬಡಜನ ಬುತ್ತಾಮವಾದುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮಲ್ಲಿ ಮನೆ ಕೊಡುವ ಕಾರ್ಯಕ್ರಮ ಅಂದು ದಿ: ಶ್ರೀಮತಿ ಇಂದಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮದಲ್ಲಿ ಆರಂಭವಾದುದು, ಹಂತ ಹಂತವಾಗಿ ಆಗಾಗ ಹೆಚ್ಚು ಕಡಿಮೆಯಾಗುವ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಸನ್ಮಾನ್ಯ ಎಸ್.ಎಸ್. ಕೃಷ್ಣಂವರ ನೇತೃತ್ವದಲ್ಲಿ ಬಂದಂತಹ ಸರ್ಕಾರ ರಾಜೀವ್‌ಗಾಂಧಿ ವಸತಿ ನಿಗಮ ಎನ್ನುವುದನ್ನು ಮಾಡಿ ಬಹಳ ದೊಡ್ಡ ಗಾತ್ರದಲ್ಲಿ ನಮ್ಮ ರಾಜ್ಯದಲ್ಲಿ ಮನೆಗಳನ್ನು, ದುರ್ಬಲವರ್ಗದವರಿಗೆ, ಅವಕಾಶವಿಂದು ವಂಚಿತರಾದವರಿಗೆ ಕೊಟ್ಟಂತಹ ಒಂದು ಇತಿಹಾಸ ಇದೊಂದು ಬಾಕಿಯಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕೆ ಹೆಚ್ಚು ಒತ್ತು ಕೊಡುವ ಒಂದು ವ್ಯವಸ್ಥೆಯನ್ನು ಸರ್ಕಾರ ಮುಂದಿನ ದಿವಸಗಳಲ್ಲಿ ಮಾಡಿಕೊಂಡು ಬಂದಾಗ ದುರ್ಬಲವರ್ಗಕ್ಕೆ ಇದರಿಂದ ಹೆಚ್ಚು ಸಹಾಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಪ್ರೋತ್ಸಾಹ ಇವತ್ತು ಸಿಗುತ್ತದೆ. ಅದನ್ನೂ ಕೂಡ ನಮ್ಮ ಕರ್ನಾಟಕ ರಾಜ್ಯ ಬಯಲಾಲದ ಛಾಯೆಯಲ್ಲಿ ನಾವೆಲ್ಲಾ ಇದ್ದೇವೆ ಮೂರು ವರ್ಷಗಳ ಕಾಲ ಆ

(†ಈ ಚಿಹ್ನೆ ಮಾನ್ಯ ಸದಸ್ಯ ಹಿಜ್ಞೆ ಅಥವಾ ಭಾಷಣವನ್ನು ದೃಢೀಕರಿಸಿಲ್ಲವೆಂಬ ಸೂಚಿಸುತ್ತದೆ)